ಪ್ರಬಂಧ ಸ್ಪರ್ಧೆ

ಮೆಚ್ಚುಗೆ ಪಡೆದ ಪ್ರಬಂಧ

◆ ಜಿ.ವಿ. ಅರುಣ

ಕಲೆ: ಸಂತೋಷ್ ಸಸಿಹಿತ್ಲು

# ಬಣ್ಣದ ಬುಗುರಿಯ ಸಮಾಜವಾದ

**ಸಮಾಜವಾದಿ ಬುಗುರಿಯಾಟವನ್ನು ಬಂಡವಾಳಶಾಹಿ ಕ್ರಿಕೆಟ್ಟಿನೊಂದಿಗೆ ಹೋಲಿಸಿದರೆ ಬುಗುರಿಯ ಹಿರಿಮೆ ಗೊತ್ತಾಗುತ್ತದೆ. ಬುಗುರಿಯ ಆಟವನ್ನು ಆಡುವಾಗ ಒಬ್ಬರ ನಂತರ ಮತ್ತೊಬ್ಬರಿಗೆ ವೃತ್ತದಲ್ಲಿರುವ ಬುಗುರಿಯನ್ನು ಎಗರಿಸುವ ಅವಕಾಶವು ಬರುತ್ತದೆ. ಆಟದ ಕೊನೆಗೆ ಆಟವಾಡಿದವರೆಲ್ಲರೂ ಗೆದ್ದಿರುತ್ತಾರೆ.**

